# ಪುರಸಭಾ ಕಾರ್ಯಲಯ ಉಳ್ಳಾಲ

## ಉಳ್ಳಾಲ ದ.ಕ. 575020

ನಂಬ್ರ : ಉಪುಸ (6) ಸಿಆರ್ 49/2009–10 ದಿನಾಂಕ : 18–01–2010

## ಟೆಂಡರು ಪ್ರಕಟಣೆ

ಉಳ್ಳಾಲ ಪುರಸಭೆಗೆ ಬಿಡುಗಡೆಯಾದ ಸಿ.ಎಂಎಸ್ಎಂಟಿಡಿಪಿ ಯೋಜನೆ 2009–10ನೇ ಸಾಲಿನಲ್ಲಿ ಮಂಜೂರಾದ ಈ ಕೆಳಗಿನ ಕಾಮಗಾರಿಗಳನ್ನು ನಿರ್ವಹಿಸಲು ಮೊಹರು ಮಾಡಿದ ಐಟಂವಾರು ಟೆಂಡರುಗಳನ್ನು ನಿಗದಿತ ನಮೂನೆಯಲ್ಲಿ ಮುಖ್ಯಾಧಿಕಾರಿ, ಉಳ್ಳಾಲ ಪುರಸಭೆ ಇವರು ಕರ್ನಾಟಕ ಪಾರದರ್ಶಕತೆ ಸಾರ್ವಜನಿಕ ಸಂಗ್ರಹಣೆ ಅಧಿನಿಯಮ 2000ರ ಅನ್ವಯ ಉಳ್ಳಾಲ ಪುರಸಭೆಯಲ್ಲಿ ನೋದಾಯಿತ ಪಿ.ಡಬ್ಲ್ಯು.ಡಿ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟು ಪ್ರಕಾರ ಟೆಂಡರು ಕರೆಯಲಾಗಿದೆ. 1)ಖಾಲಿ ಟೆಂಡರು ಫಾರ್ಮ್‌ಗಳಗೆ ಅರ್ಜಿ ಸಲ್ಲಿಸುವ ಮತ್ತು ಖಾಲಿ ಟೆಂಡರು ಫಾರ್ಮ್ ನೀಡುವ ಕೊನೆಯ ದಿನಾಂಕ 24–02–2010 3)ಭರ್ತಿ ಮಾಡಿದ ಟೆಂಡರು ಸಲ್ಲಿಸುವ ಕೊನೆಯ ದಿನಾಂಕ 25–02–2010, ಅಪರಾಹ್ನ 4.00 ಗಂಟೆಯವರೆಗೆ ಅನಿವಾರ್ಯ ಸಂದರ್ಭಗಳನ್ನು ಹೊರತುಪಡಿಸಿ ಬಂದ ಟೆಂಡರುಗಳನ್ನು ಅದೇ ದಿನ ತೆರೆಯಲಾಗುವುದು. ಇಲ್ಲದಿದ್ದಲ್ಲಿ ಟೆಂಡರು ತೆರೆಯುವ ಮುಂದಿನ ದಿನವನ್ನು ತಿಳಿಸಲಾಗುವುದು ಟೆಂಡರುಗಳನ್ನು ಸ್ವೀಕರಿಸುವುದು. ನಿರಾಕರಿಸುವುದು ಅಥವಾ ಅವಶ್ಯವೆಂದು ಕಂಡುಬಂದಲ್ಲಿ ಯಾವುದೇ ಕಾರಣ ನೀಡದೆ ಟೆಂಡರು ಅವಧಿಯನ್ನು ಮುಂದೂಡುವ ಹಕ್ಕನ್ನು ಪುರಸಭೆ ಕಾದಿರಿಸಿಕೊಂಡಿದೆ. ಟೆಂಡರು ಶರ್ತಗಳನ್ನು ಮತ್ತು ಇತರ ಮಾಹಿತಿಗಳನ್ನು ,ರಜಾದಿನಗಳನ್ನು ಹೊರತುಪಡಿಸಿ ಪುರಸಭಾ ಕಚೇರಿಯಲ್ಲಿ ಕಚೇರಿ ಸಮಯದಲ್ಲಿ ಪಡೆಯಬಹುದು.

| ಕ್ರ.ಸಂ | ಕಾಮಗಾರಿಯ ಹೆಸರು | ಟೆಂಡರಿಗಿಟ್ಟ ಮೊತ್ತ ಲಕ್ಷಗಳಲ್ಲಿ | ಇ.ಯಂ.ಡಿ ಮೊತ್ತ | ಟೆಂಡರು ಫಾರ್ಮು ಬೆಲೆ (ತೆರಿಗೆಗಳು ಸೇರಿ) | ಗುತ್ತಿಗೆದಾರರ ಅರ್ಹತೆ | ಕೆಲಸ ಪೂರ್ಣಗೊಳಿಸುವ ಅವಧಿ |
|---|---|---|---|---|---|---|
| 2 | ಉಳ್ಳಾಲ ಪುರಸಭಾ ವ್ಯಾಪ್ತಿಯ ಉಳ್ಳಾಲ ಬೈಲು ಅನಿಲ ಕಂಪೌಡಿನಿಂದ ಉಳ್ಳಾಲಬೈಲು ಬೊಟ್ಟು ಮಸೀದಿಯವರೆಗೆ ತೋಡು ಕಾಂಕ್ರೀಟ್ ಬದಿ ರಚನೆ ಮತ್ತು ಅಳೇಕಲ ಮದನಿ ಕಾಲೇಜಿನಿಂದ ಪಾವ್ಲ್ ಡಿಸೋಜಾ ಮನೆವರೆಗೆ ಕಾಂಕ್ರೀಟ್ ಚರಂಡಿ ರಚನೆ. | 20.00 | 50000.00 | 2000.00 | 2ನೇ ದರ್ಜೆ ಗುತ್ತಿಗೆದಾರರು | 3ತಿಂಗಳು |
| 3 | ಉಳ್ಳಾಲ ಪುರಸಭಾ ವ್ಯಾಪ್ತಿಯ 1) ಕೋಡಿ ಶಾಲೆ ಹಿತ್ಲು ಚರಂಡಿ ಕಾಂಕ್ರೀಟ್ ಬದಿ ರಚನೆ 2) ಕೋಡಿ ದಿ.ಇಬ್ರಾಹಿಂ ಹಾಜಿಯವರ ಮನೆ ಎದುರಿನಿಂದ ಸಿಲ್ವಾನಿಯ ರಸ್ತೆಯವರೆಗೆ ಮತ್ತು ಕೋಟೆಪುರ ಮಸೀದಿಯ ಹಿಂದುಗಡೆ ಕಾಂಕ್ರೀಟ್ ಚರಂಡಿ ರಚನೆ 3) ಮುಕ್ಕಚೇರಿ ಹೈದರಾಲಿ ರಸ್ತೆ ಬದಿ ಕಾಂಕ್ರೀಟ್ ಚರಂಡಿ ರಚನೆ. | 21.00 | 52500.00 | 2100.00 | 2ನೇ ದರ್ಜೆ ಗುತ್ತಿಗೆದಾರರು | 3ತಿಂಗಳು |
| 7 | ಉಳ್ಳಾಲ ಪುರಸಭಾ ವ್ಯಾಪ್ತಿಯಲ್ಲಿ ಕೆ.ಯು.ಐ.ಡಿ.ಎಫ್.ಸಿ ಅನುಷ್ಠಾನಗೊಳಿಸುತ್ತಿರುವ ನೀರು ಸರಬರಾಜು ಯೋಜನೆಯಲ್ಲಿ ಬಾಕಿ ಉಳಿದಿರುವ 18.50 ಕಿ.ಮೀ ಕೊಳವೆಸಾಲು ಕಾಮಗಾರಿಯಲ್ಲಿ ಭಾಗಶ: ಅಳವಡಿಸುವುದು | 25.00 | 62500.00 | 2500.00 | 2ನೇ ದರ್ಜೆ ಗುತ್ತಿಗೆದಾರರು | 3ತಿಂಗಳು |
| 8 | ಉಳ್ಳಾಲ ಪುರಸಭಾ ವ್ಯಾಪ್ತಿಯ ಒಂಭತ್ತುಕೆರೆ ಆಶ್ರಯ ಕಾಲಿನಿ ಬಳಿ 2.50 ಲಕ್ಷ ಲೀ. ಮೇಲ್ಮಟ್ಟದ–ಜಲ ಸಂಗ್ರಹಾಗಾರ ರಚನೆ. | 30.00 | 75000.00 | 3000.00 | 1ನೇ ದರ್ಜೆ ಗುತ್ತಿಗೆದಾರರು | 3ತಿಂಗಳು |

ಅಧ್ಯಕ್ಷರು
ಉಳ್ಳಾಲ ಪುರಸಭೆ ದ.ಕ

ಮುಖ್ಯಾಧಿಕಾರಿ
ಉಳ್ಳಾಲ ಪುರಸಭೆ ದ.ಕ

**ಶರ್ತಗಳು**

1. ಪುರಸಭೆ ಕಛೇರಿಯಲ್ಲಿ ನೊಂದಾಯಿಸಲ್ಪಟ್ಟ ಪಿಡಬ್ಲ್ಯೂಡಿ ಗುತ್ತಿಗೆದಾರರು ಮಾತ್ರ ಟೆಂಡರಲ್ಲಿ ಭಾಗವಹಿಸತಕ್ಕಸದ್ದು.

2. ಟೆಂಡರುಗಳನ್ನು ದ್ವಿಲಕೋಟೆ ಪದ್ಧತಿಯಲ್ಲಿ ಸಲ್ಲಿಸತಕ್ಕದ್ದು. ಲಕೋಟೆ (1) ತಾಂತ್ರಿಕ ಬಿಡ್ಡಿಗೆ ಸಂಬಂದಿಸಿದ್ದು ಲಕೋಟೆ (2) ಆರ್ಥಿಕ ಬಿಡ್ಡಿಗೆ ಸಂಬಂದಿಸಿದಾಗಿರುತ್ತದೆ.

3. ಲಕೋಟೆ (1) ತಾಂತ್ರಿಕ ಬಿಡ್ಡ್ ಹಾಗೂ ಲಕೋಟೆ (2) ಆರ್ಥಿಕ ಬಿಡ್ಡ್‌ಗಳನನ್ನು ಪ್ರತ್ಯೇಕವಾಗಿ ಸೀಲ್ ಮಾಡಿ ಎರಡನ್ನು ಒಂದೇ ಲಕೋಟೆಯಲ್ಲಿ ಇಟ್ಟು ಮೊಹರು ಮಾಡಿ ಟೆಂಡರು ಪೆಟ್ಟಿಗೆಯಲ್ಲಿ ನಿಗದಿತ ದಿನಾಂಕ ಮತ್ತು ಸಮಯದ ಒಳಗೆ ಹಾಕತಕ್ಕದ್ದು. (3) ನಿಗದಿತ ದಿನಾಂಕದಂದು ಮೊದಲು ತಾಂತ್ರಿಕ ಬಿಡ್ಡ್ ಲಕೋಟೆ (1) ನ್ನು ತೆರೆದು ಪರಿಶೀಲಿಸಲಾಗುವುದು. ತಾಂತ್ರಿಕ ಬಿಡ್ಡಿನಲ್ಲಿ ಅರ್ಹತೆ ಹೊಂದಿದ ಬಿಡ್ಡುದಾರರ ಮಾತ್ರ ಆರ್ಥಿಕ ಬಿಡ್ಡುಗಳನ್ನು (ಲಕೋಟೆ 2) ಮಾತ್ರ ನಂತರ ತೆರೆಯಲಾಗುವುದು. ಹಾಗೂ ಈ ಸಂಬಂದ ದಿನಾಂಕವನ್ನು ತಿಳಿಸಲಾಗುವುದು.

4. (ಲಕೋಟೆ 1) ಗುತ್ತಿಗೆದಾರರು ಹಿಂದಿನ 5 ವರ್ಷಗಳಲ್ಲಿ ನಿರ್ವಹಿಸಿದ ಕಾಮಗಾರಿಗಳ ಮೊತ್ತದ ಬಗ್ಗೆ ಚಾರ್ಟಡ್ ಅಕೌಂಟೆಂಟ್‌ರವರಿಂದ ಪ್ರಮಾಣ ಪತ್ರವನ್ನು ಟೆಂಡರ್‌ನೊಂದಿಗೆ ಸಲ್ಲಿಸತಕ್ಕದ್ದು.

5. (ಲಕೋಟೆ 1) ಸದ್ರಿ ಕಾಮಗಾರಿ ಮೊತ್ತದ ಶೇಕಡ 50 ರಷ್ಟು ಮೊತ್ತದ ಕಾಮಗಾರಿಯನ್ನು ತೃಪ್ತಿಕರವಾಗಿ ನಿರ್ವಹಿಸಿರುವ ಬಗ್ಗೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಂದ ದೃಡೀಕರಣ ಪತ್ರ ಪಡೆದು ಸಲ್ಲಿಸತಕ್ಕದ್ದು.

6. ಗುತ್ತಿಗೆದಾರರ ಟೆಂಡರ್ ಕೆಪಾಸಿಟಿ ಮೊತ್ತವು ಕಾಮಗಾರಿಗೆ ಇಟ್ಟಿರುವ ಕೆಲಸದ ಮೊತ್ತಕ್ಕಿಂತ ಹೆಚ್ಚಾಗಿದ್ದಲ್ಲಿ ಮಾತ್ರ ಅಂಥವರ ಟೆಂಡರ್‌ಗಳನ್ನು ಮೌಲ್ಯ ನಿರ್ಧರಣಾ ಮಾಡಲಾಗುವುದು.

7. ಗುತ್ತಿಗೆದಾರರ ಟೆಂಡರು ಅಂಗೀಕೃತ ಪತ್ರವನ್ನು ಸ್ವೀಕರಿಸಿದ 20 ದಿನಗಳ ಒಳಗೆ ಗುತ್ತಿಗೆ ಕರಾರು ಪತ್ರದ ಶೇ 5 ರಷ್ಟು ಹಣವನ್ನು ಮುಖ್ಯಾಧಿಕಾರಿ ಉಳ್ಳಾಲ ಪುರಸಭೆ ಇವರ ಹೆಸರಿಗೆ ಭದ್ರತಾ ಠೇವಣಿಯಾಗಿ (Performance Security) ಪಾವತಿಸತಕ್ಕದ್ದು.

8. ಗುತ್ತಿಗೆದಾರರು ಟೆಂಡರು ಫಾರ್ಮು ಬೆಲೆಗಳನ್ನು ಮುಖ್ಯಾಧಿಕಾರಿ ಉಳ್ಳಾಲ ಪುರಸಭೆ ಇವರಿಗೆ ನಗದು ಯಾ ಡಿಡಿ ರೂಪದಲ್ಲಿ ಅರ್ಜಿಯ ಜೊತೆಯಲ್ಲಿ ಪಾವತಿಸತಕ್ಕದ್ದು. ಅರ್ಜಿಯ ಜೊತೆಯಲ್ಲಿ ಗುತ್ತಿಗೆದಾರರು ನೋಂದಣಿ ಪುಸ್ತಕದ ಕಾಮಗಾರಿಯ ವಿವರಗಳ ಪ್ರತಿಯನ್ನು ಹಾಗೂ ಇತ್ತೀಚಿನ ಆದಾಯ ತೆರಿಗೆ ತೀರುವಳಿ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು.

9. (ಲಕೋಟೆ 1) ಇಎಂಡಿ ಮೊತ್ತವನ್ನು ಷೆಡ್ಯೂಲ್ / ರಾಷ್ಟ್ರೀಕೃತ ಬ್ಯಾಂಕ್‌ಗಳ ಡಿಡಿ, ಬ್ಯಾಂಕ್ ಗ್ಯಾರಂಟಿ, ಬ್ಯಾಂಕರ್ಸ್ ಚೆಕ್ ಅಥವಾ ನಗದು ರೂಪದಲ್ಲಿ ಮುಖ್ಯಾಧಿಕಾರಿ ಉಳ್ಳಾಲ ಪುರಸಭೆ ಇವರ ಹೆಸರಿಗೆ ಪಾವತಿಸತಕ್ಕದ್ದು.

10. ಕಾಮಗಾರಿಗೆ ಅವಶ್ಯವಿರುವ ಸಾಮಾಗ್ರಿಗಳಾದ ಉಕ್ಕು, ಸಿಮೆಂಟ್ ಇತ್ಯಾದಿ ಸಾಮಾಗ್ರಿಗಳನ್ನು ಗುಣ ನಿಯಂತ್ರಣ ಅಧಿಕಾರಿಗಳಿಂದ ಗುಣಮಟ್ಟದ ಬಗ್ಗೆ ದೃಡೀಕರಣ ಪತ್ರ ಸಲ್ಲಿಸತಕ್ಕದ್ದು. ಪುರಸಭೆಯಿಂದ ಯಾವುದೇ ಸಾಮಾಗ್ರಿಗಳನ್ನು ಸರಬರಾಜು ಮಾಡಲಾಗುವುದಿಲ್ಲ.

11. ನಿಬಂದನೆಗೊಳಪಟ್ಟ ಟೆಂಡರ್‌ಗಳನ್ನು ಸ್ವೀಕರಿಸಲಾಗುವುದಿಲ್ಲ.

12 ಕಾರ್ಮಿಕ ಕಲ್ಯಾಣ ನಿಧಿಗಾಗಿ ಗುತ್ತಿಗೆದಾರರ ಬಿಲ್ ಮೊತ್ತದಲ್ಲಿ ಶೇ.1 ರಷ್ಟು ಕಡಿತಗೊಳಿಸಲಾಗುವುದು.

13. ಕಾಮಗಾರಿಗೆ ಙಟಿಚಿಟಜಚಿಜ Tender Document ಅನ್ವಯ ಟೆಂಡರ್ ಕರೆಯಲಾಗುತ್ತಿದ್ದು ಹೆಚ್ಚಿನ ವಿವರಗಳಿಗೆ ಗುತ್ತಿಗೆದಾರರು ಮುಂಚಿತವಾಗಿ ಈ ಕಚೇರಿಗೆ ಬಂದು ಪಡೆಯತಕ್ಕದ್ದು.

14. (ಲಕೋಟೆ 1) ಕಾಮಗಾರಿಗೆ ಅವಶ್ಯವಿರುವ ಯಂತ್ರೋಪಕರಣಗಳ ಪೈಕಿ ಕನಿಷ್ಠ ಶೇ 50 ಸ್ವಂತ ಮಾಲಕತ್ವದ ಬಗ್ಗೆ ಮತ್ತು ಉಳಿದ ಯಂತ್ರೋಪಕರಣಗಳು ಬಾಡಿಗೆ ಪಡೆಯುವ ಬಗ್ಗೆ ದಾಖಲೆಗಳನ್ನು ಸಲ್ಲಿಸತಕ್ಕದ್ದು.

15. ಟೆಂಡರು ಸ್ವೀಕರಿಸುವ ನಿರಾಕರಿಸುವ ಅಥವಾ ಅವಶ್ಯವೆಂದು ಕಂಡು ಬಂದ್ದಲ್ಲಿ ಯಾವುದೇ ಕಾರಣ ನೀಡದೇ ಟೆಂಡರ್ ಅವಧಿಯನ್ನು ಮುಂದೂಡುವ ಹಕ್ಕನ್ನು ಮುಖ್ಯಾಧಿಕಾರಿ ಉಳ್ಳಾಲ ಪುರಸಭೆ ಇವರು ಕಾಯ್ದಿರಿಸಿಕೊಂಡಿರುತ್ತಾರೆ.

16. ಸದ್ರಿ ಟೆಂಡರುಗಳಲ್ಲಿ ಸಕ್ಷಮ ಪ್ರಾಧಿಕಾರದ ತೀರ್ಮಾನ ಅಂತಿಮವಾಗಿರುತ್ತದೆ

ಅಧ್ಯಕ್ಷರು
ಉಳ್ಳಾಲ ಪುರಸಭೆ ದ.ಕ

ಮುಖ್ಯಾಧಿಕಾರಿ
ಉಳ್ಳಾಲ ಪುರಸಭೆ ದ.ಕ